<u>ದಿನಾಂಕಃ 07.03.2026 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ವಕೀಲರಿಂದಃ</u>

ನಮ್ಮ ಕುಟುಂಬಕ್ಕೆ ವ್ಯವಸಾಯದ ಆದಾಯವನ್ನು ಬಿಟ್ಟು ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಎಲ್ಲವೂ ನಮ್ಮ ಪೂರ್ವಿಕರಿಂದ ಬಂದಂತಹ ಆಸ್ತಿಗಳು ಎಂದರೆ ಸರಿ. ನಮ್ಮ ಪೂರ್ವಿಕರು ಯಾವುದೇ ಕುಟುಂಬದ ಸದಸ್ಯರ ಹೆಸರಿಗೆ ದಾಖಲೆಗಳನ್ನು ಬರೆದಿಟ್ಟು ಹೋಗಿಲ್ಲ ಎಂದರೆ ಸರಿ. ನಾನು ಮತ್ತು ಸಹೋದರ ಸಹೋದರಿಯರು ಕೂಡ ಯಾವುದೇ ತರಹದ ನೋಂದಾಯಿತ ದಾಖಲೆಗಳನ್ನು ಮಾಡಿಕೊಂಡಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಿಂದ ವಾರ್ಷಿಕ 8 ರಿಂದ 10 ಲಕ್ಷ ಬರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಯಾವುದೇ ಆದಾಯ ಬರುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ಎಲ್ಲವೂ ಬೀರೂರು ಮತ್ತು ಅಜ್ಜಂಪುರ ಮುಖ್ಯ ರಸ್ತೆಗೆ ಹೊಂದಿಕೊಂಡು ಇವೆ ಎಂದರೆ ಸರಿಯಲ್ಲ, ಒಂದು ಆಸ್ತಿ ಮಾತ್ರ ಇರುತ್ತದೆ ಉಳಿದವುಗಳು ಚೆನ್ನಾಪುರ ಗ್ರಾಮದ ಸೀಮೆಯಲ್ಲಿ ಇವೆ. ಅಜ್ಜಂಪುರ ಪಟ್ಟಣ ಈಗ ಚೆನ್ನಾಪುರದವರೆಗೆ ಬೆಳೆದಿದೆ ಎಂದರೆ ಸರಿ. ಅಲ್ಲಿರುವ ಎಲ್ಲಾ ಜಮೀನುಗಳು ನಿವೇಶನಗಳನ್ನು ಮಾಡಲು ಯೋಗ್ಯವಾಗಿವೆ ಎಂದರೆ ಸರಿ. ರಸ್ತೆಯ ಪಕ್ಕದಲ್ಲಿ ಇರುವ ಜಮೀನುಗಳು ಎಕರೆಗೆ ಸುಮಾರು 1 ಕೋಟಿ ರೂಪಾಯಿ ಬೆಲೆ ಬಾಳುತ್ತವೆ ಎಂದರೆ ಸರಿಯಲ್ಲ, 10-20 ಲಕ್ಷ ರೂ ಬೆಲೆ ಬಾಳುತ್ತವೆ. ದಾವಾ ಆಸ್ತಿಗಳಲ್ಲಿ ಈರುಳ್ಳಿ, ಮೆಣಸಿನಕಾಯಿ ಅಂತಹ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜಮೀನುಗಳ ಪೈಕಿ 1-ವರೆ ಎಕರೆಯಲ್ಲಿ ಮಾತ್ರ ಬೆಳೆಯುತ್ತೇವೆ ಎನ್ನುತ್ತಾರೆ. ನಮಗೆ ಇರುವ ಎಲ್ಲಾ ಜಮೀನುಗಳು ಕಪ್ಪು ಮಣ್ಣಿನ ಜಮೀನುಗಳು ಎಂದರೆ ಸಾಕ್ಷಿಯು ಆ ಪೈಕಿ 2 ಎಕರೆ ಮರಳು ಜಮೀನು ಇದೆ ಎಂದು ಹೇಳುತ್ತಾರೆ.

2. ಸಾಮಾನ್ಯವಾಗಿ ಕಪ್ಪು ಭೂಮಿಯಲ್ಲಿ ವಾರ್ಷಿಕ 2 ಬೆಳೆ ಬೆಳೆಯುತ್ತೇವೆ ಎಂದರೆ ಸರಿ. ದಾವಾ ಜಮೀನುಗಳಲ್ಲಿ ವಾಸದ ಮನೆಗಳನ್ನು ಕೂಡ ಕಟ್ಟಿಕೊಂಡಿದ್ದೇವೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು 25 ವರ್ಷಗಳ ಹಿಂದೆ ಭಾಗ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಸರ್ವೆ ನಂ.56/2 ರಲ್ಲಿ ಮಂಗಳೂರು ಹೆಂಚಿನ ಮನೆ ಇದೆ ಎಂದರೆ ಸರಿಯಲ್ಲ, ಶೀಟು ಹಾಕಲಾಗಿದೆ. ಸದರಿ ಮನೆಯನ್ನು ಇತ್ತೀಚೆಗೆ ಕಟ್ಟಲಾಗಿದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ.56/4 ರಲ್ಲಿ ಒಂದು ಆರ್.ಸಿ.ಸಿ ಮನೆ ಇದೆ ಎಂದರೆ ಸರಿ ಸಾಕ್ಷಿಯು ಅದನ್ನು ನಾನೇ ಕಟ್ಟಿಸಿದ್ದೇನೆ ಎನ್ನುತ್ತಾರೆ. ಸದರಿ ಮನೆಗಳನ್ನು ದಾವಾ ಆಸ್ತಿಗಳಿಂದ ಬಂದ ಉತ್ಪನ್ನದಿಂದ ಕಟ್ಟಿಸಲಾಗಿದೆ ಎಂದರೆ ಸರಿಯಲ್ಲ, ಸಾಕ್ಷಿಯು ಸಾಲ ಮಾಡಿ ಮತ್ತು ನನ್ನ ಮಗಳ ಉದ್ಯೋಗದಿಂದ ಬಂದ ಹಣದಲ್ಲಿ ಕಟ್ಟಿಸಿದ್ದೇನೆ ಎನ್ನುತ್ತಾರೆ. ನಮ್ಮ ಅಣ್ಣ ಗಿರೀಶ್ ಅಂದರೆ ವಾದಿಯ ತಂದೆ 1995 ನೇ ಸಾಲಿನಲ್ಲಿ ಮರಣ

ಹೊಂದಿದ್ದಾರೆ. ಗಿರೀಶ್ ಈತನ ಮರಣದ ನಂತರ ವಾದಿ ಮತ್ತು ಅವರ ತಾಯಿ ತವರು ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ, ಬೆಂಗಳೂರಿನಲ್ಲಿ ವಾಸ ಇದ್ದಾರೆ. ತಾಯಿಯ ತವರು ಮನೆಯ ಸಹಾಯದಿಂದ ವಾದಿಯು ಅಭ್ಯಾಸ ಮಾಡಿದ್ದಾಳೆ ಎಂದರೆ ಸರಿಯಲ್ಲ, ಗಿರೀಶನಿಗೆ ಕಂಪನಿಯಿಂದ ಪೆನ್ಷನ್ ಬರುತ್ತಿತ್ತು ಎಂದು ಹೇಳುತ್ತಾರೆ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳು ಎಲ್ಲವೂ ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇವೆ ಎಂದರೆ ಸರಿ. ಆಕೆ ಇತ್ತೀಚೆಗೆ ಮರಣ ಹೊಂದಿದ್ದಾರೆ. ಮರಣ ಹೊಂದಿ 1 ವರ್ಷ ಆಗಿದೆ. ನಾವು ಮಲ್ಲೇನಹಳ್ಳಿಯಲ್ಲಿ ವಾಸವಿದ್ದೇವೆ. ನನ್ನ ಅಣ್ಣನ ಮಗಳಿಗೆ ಅಂದರೆ ವಾದಿಗೆ ಭಾಗವನ್ನು ಕೊಡಲು ಯಾವುದೇ ಪ್ರತಿವಾದಿಗಳಿಗೂ ಇಚ್ಛೆ ಇಲ್ಲ ಮತ್ತು ನೋಂದಾಯಿತ ದಾಖಲೆ ಮಾಡಿಕೊಡಲು ಮನಸ್ಸಿಲ್ಲ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳಿಗೂ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ವಾದಿಗೆ ಭಾಗ ಕೊಡುವುದನ್ನು ಮುಂದೂಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಾಗುವಳಿಯನ್ನು ನಾನು ಮತ್ತು 3 ನೇ ಪ್ರತಿವಾದಿ ಮಾತ್ರ ಮಾಡಿಕೊಂಡು ಹೋಗುತ್ತಿದ್ದೇವೆ ಮತ್ತು ಉತ್ಪನ್ನವನ್ನು ನಾವೇ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಕಾನೂನು ಪ್ರಕಾರ ಎಲ್ಲಾ ಆಸ್ತಿಗಳು ಜಂಟಿ ಸ್ವಾಧೀನದಲ್ಲಿ ಇವೆ ಎಂದರೆ ಸರಿಯಲ್ಲ, ವಾದಿಗೆ ಕೂಡ ದಾವಾ ಆಸ್ತಿಗಳಲ್ಲಿ ಸಮನಾದ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಮತ್ತು 3 ನೇ ಪ್ರತಿವಾದಿ ಬಾಯಿ ಮಾತಿನ ಮೂಲಕ ಭಾಗ ಮಾಡಿಕೊಂಡು ವಾದಿಗೆ ಪಾಲು ಕೊಡುತ್ತಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ನಮ್ಮ ತಂದೆಯೇ ಭಾಗ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

4. ದಾವಾ ಆಸ್ತಿಗಳಲ್ಲಿ ಕೇವಲ 1 ಎಕರೆ 13 ಗುಂಟೆ ಜಮೀನಿನಲ್ಲಿ ಮಾತ್ರ ತೆಂಗಿನ ತೋಟ ಇದೆ. ತೋಟದಿಂದ ಈಗ ಫಸಲು ಬರುತ್ತಿದೆ ಎಂದರೆ ಸರಿ. ವಾರ್ಷಿಕ 10 ಸಾವಿರ ತೆಂಗಿನ ಕಾಯಿ ಬರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ಜಮೀನುಗಳಿಗೆ ನೀರಿನ ಸವಲತ್ತು ಇದೆ ಎಂದರೆ ಸರಿಯಲ್ಲ. ಸರ್ವೆ ನಂ.56 ಮಾತ್ರ ಊರಿಗೆ ಸಮೀಪ ಇದೆ ಉಳಿದ ಜಮೀನುಗಳು ಸ್ವಲ್ಪ ದೂರದಲ್ಲಿ ಇವೆ. ನಮ್ಮ ಕುಟುಂಬದಿಂದ ವಾದಿಗೆ ಮತ್ತು ಆಕೆಯ ಭವಿಷ್ಯಕ್ಕೆ ಯಾವುದೇ ರೀತಿಯ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೂ ಕೂಡ ಹಕ್ಕು ಕೂಡ ಇದೆ ಎಂದರೆ ಸಾಕ್ಷಿಯು ಅಗಲೇ ಭಾಗ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆಕೆಗೆ ಕೊಟ್ಟಿರುವ ಜಮೀನುಗಳ ಕುರಿತು ನೋಂದಾಯಿತ ದಾಖಲೆ ಮಾಡಿಕೊಡಲು ತೊಂದರೆ ಇಲ್ಲ ಎಂದರೆ ಮೊದಲಿಗೆ ತೊಂದರೆ ಇತ್ತು ಈಗ ಇಲ್ಲ ಎನ್ನುತ್ತಾರೆ. ನೋಂದಾಯಿತ ದಾಖಲೆ ಮಾಡಿಕೊಟ್ಟರೆ ಅವರು ಮಾರಿಕೊಂಡು ಹೋಗಬಹುದು ಎಂಬ ಕಾರಣಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

OS.No.:94/2023
DW:1

<u>ಮರು ವಿಚಾರಣೆಃಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**ಸಹಿ/-**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.